ವ್ಯಕ್ತಿಗಳ ಆಲೋಚನಾತರಂಗಗಳಲ್ಲದೆ, ವಿಶ್ವಾತ್ಮಕ ಚಿಂತನಾತರಂಗಗಳೂ ಅಸ್ತಿತ್ವದಲ್ಲಿವೆ. ಇವು ವಿಶ್ವಮಾನಸವಾದ ಮಹತ್ತಿನಲ್ಲಿ ಮೂಡುತ್ತವೆ. ಇವು ಶಬ್ದಬ್ರಹ್ಮವೆಂದು ಕರೆಯಲಾಗುವ ಸ್ಫೋಟದ ಅಭಿವ್ಯಕ್ತಿಗಳೇ ಆಗಿವೆ. ಈ ಸಾರ್ವತ್ರಿಕ ತರಂಗಗಳು ಕಾಲಕಾಲಕ್ಕೆ ಹುಟ್ಟಿ, ಪ್ರಪಂಚದೆಲ್ಲೆಡೆ ಪಸರಿಸುತ್ತವೆ; ಆ ಮೂಲಕ ಮಾನವ ಇತಿಹಾಸದಲ್ಲಿ ನೂತನ ಯುಗಗಳನ್ನು ಸೃಷ್ಟಿಸುತ್ತವೆ. ಒಂದು ನಿರ್ದಿಷ್ಟ ಯುಗದ ಯುಗಧರ್ಮವನ್ನು ನಿರ್ಧರಿಸುವಂಥವೂ ಇವೇ ಆಗಿವೆ. ಇದರ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಬರಿಯ ಆಲೋಚನೆಗಳು ಕಿರಿದಾದ ಅಲೆಗಳಂತೆ ಇರುತ್ತವೆ. ಅವುಗಳು ಚಲಿಸುವಂತೆ ಮಾಡಲು ಹೊಸ ಪ್ರೇರಣೆಗಳು ಏಕಕಾಲದಲ್ಲಿ ಮೂಡಿಬರುತ್ತವೆ. ಕೊನೆಗೆ ದೊಡ್ಡದೊಂದು ಅಲೆಯೆದ್ದು ಕಿರಿದಾದ ಅಲೆಗಳನ್ನೆಲ್ಲ ತನ್ನಲ್ಲಿ ಅಡಗಿಸಿಕೊಳ್ಳುತ್ತದೆ. ಈ ವಿಶ್ವವ್ಯಾಪಕ ಭಾವತರಂಗಗಳು ಐನೂರು ವರ್ಷಕ್ಕೆ ಒಮ್ಮೆ ಏಳುವಂತೆ ತೋರುವುದು" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೭, ಪುಟ.೨೩೮).

**ಪ್ರವಾದಿಯ ಪಾತ್ರ :** ಆರ್ನಾಲ್ಡ್ ಟಾಯನ್‌ಬಿ ಹನ್ನೆರಡು ಸಂಪುಟಗಳಲ್ಲಿ Study of History ಎಂಬ ಮಹಾನ್ ಗ್ರಂಥವನ್ನು ರಚಿಸಿದ್ದಾರೆ. ಭೌತಿಕ ಸಂಪತ್ತು ಮತ್ತು ಪಾಪಾಚರಣೆಯು ಹೆಚ್ಚಿದಂತೆಲ್ಲಾ ನಾಗರಿಕತೆಯೊಂದು ಅಧಃಪತನಕ್ಕೆ ಇಳಿಯುತ್ತದೆ ಎಂದು ಅವರು ಅದರಲ್ಲಿ ಹೇಳುತ್ತಾರೆ. ಆ ಸಂಕೀರ್ಣ ಸಮಯದಲ್ಲಿ ಚಿಂತಕರ ಸಣ್ಣ ಗುಂಪೊಂದು ಹುಟ್ಟಿಕೊಳ್ಳುತ್ತದೆ. ಅವರು ಹೊಸ ಭಾವನೆಗಳನ್ನು ಹೊಂದಿರುತ್ತಾರೆ; ಹೊಸ ಆದರ್ಶಗಳಿಂದ ಸ್ಫೂರ್ತಿಯನ್ನು ಪಡೆದಿರುತ್ತಾರೆ. ಆ ಆದರ್ಶಗಳು ಪ್ರತಿ ಯುಗದ ಆರಂಭದಲ್ಲಿಯೂ ಪುನರುಜ್ಜೀವನ ಪಡೆದುಕೊಳ್ಳುತ್ತವೆ. ಟಾಯನ್‌ಬಿ ಈ ಸಣ್ಣ ಗುಂಪನ್ನು ''ಸೃಜನಾತ್ಮಕ ಅಲ್ಪಸಂಖ್ಯಕರು' ಎಂದು ಕರೆಯುತ್ತಾರೆ. ಈ ಸೃಜನಾತ್ಮಕ ಅಲ್ಪಸಂಖ್ಯಕ ಗುಂಪು ಹುಟ್ಟಿಕೊಳ್ಳುವುದು ಹೇಗೆ ಮತ್ತು ಅವರು ಸ್ಫೂರ್ತಿಯುತವಾದ ಭಾವನೆಗಳನ್ನು ಹೇಗೆ ತಾನೇ ಪಡೆದುಕೊಳ್ಳುತ್ತಾರೆ? ಈ ಪ್ರಶ್ನೆಗೆ ಹಲವಾರು ಬಗೆಯ ಉತ್ತರಗಳನ್ನು ಪರೀಕ್ಷಿಸಿದ ನಂತರ ಟಾಯನ್‌ಬಿ, ಆ ಬಗೆಯ ಗುಂಪೊಂದು ಒಬ್ಬ ಆಧ್ಯಾತ್ಮಿಕ ನೇತಾರನ ಸುತ್ತಲೂ ಇರುತ್ತದೆ ಎಂಬ ನಿಷ್ಕರ್ಷೆಗೆ ಬರುತ್ತಾರೆ. ಅಂತಹ ನಾಯಕನು ಒಬ್ಬ ಪ್ರವಾದಿಯಾಗಿರಬಹುದು ಅಥವಾ ಭಗವಂತನ ಅವತಾರವೇ ಆಗಿರಬಹುದು. ಅವನು ಮಾತ್ರವೇ ಮಾನವಜನಾಂಗದ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಸದೊಂದು ಯುಗವನ್ನು ಆರಂಭಿಸಲು ಶಕ್ತನಾಗುತ್ತಾನೆ. ಟಾಯನ್‌ಬಿಗಿಂತ ನಲವತ್ತು ವರ್ಷಗಳ ಹಿಂದೆ ಮೂಡಿಬಂದ ಸ್ವಾಮಿ ವಿವೇಕಾನಂದರ ಚಿಂತನೆ ಕೂಡ ಮೇಲಿನ ಅಭಿಪ್ರಾಯಗಳಿಗೆ ಸಮಂಜಸವಾಗಿ ಹೊಂದಿಕೊಳ್ಳುವುದನ್ನು ನಾವು ಗುರುತಿಸಬಹುದು.

ಸ್ವಾಮೀಜಿಯವರ ಪ್ರಕಾರ, ಪ್ರವಾದಿಯೊಬ್ಬನು ಸಾರ್ವತ್ರಿಕ ಚಿಂತನ ತರಂಗದ ಉಚ್ಛ್ರಾಯ ಘಟ್ಟದಲ್ಲಿ ಅವತರಿಸುತ್ತಾನೆ. 'ಪ್ರವಾದಿ' ಸಿದ್ಧಪುರುಷನಾದ ಜಗದ್ಗುರುವೇ ಸರಿ. ಆತನು ಇಡೀ ಮಾನವತೆಗೆ ನೂತನ ಸಂದೇಶವೊಂದನ್ನು ಹೊತ್ತು ತರುತ್ತಾನೆ. ಹಾಗೆಯೇ ಎಲ್ಲ ಜಾಗತಿಕ ಧರ್ಮಗಳೂ ಜಗದ್ಗುರುವಿನ ಪರಿಕಲ್ಪನೆಯನ್ನು ಒಪ್ಪುತ್ತವೆ. ಹಿಂದೂಧರ್ಮ ಮತ್ತು ಕ್ರೈಸ್ತ ಧರ್ಮಗಳು ಭಗವದವತಾರದ ಕಲ್ಪನೆಯನ್ನೂ ಹೊಂದಿವೆ. ಕ್ರೈಸ್ತಧರ್ಮದ ಪ್ರಕಾರ ದೇವರು ಅವತಾರವೆತ್ತುವುದು ಇಡೀ ಮಾನವಜನಾಂಗದ ಇತಿಹಾಸದಲ್ಲಿ ಒಮ್ಮೆ ಮಾತ್ರ. ಆದರೆ ಹಿಂದೂಧರ್ಮದಲ್ಲಿ ದೇವರು ಅವತಾರರೂಪದಲ್ಲಿ, 'ಧರ್ಮವು ಅವನತಿ ಹೊಂದಿದಾಗಲೆಲ್ಲ, ಅಧರ್ಮವು ವೃದ್ಧಿಯಾದಾಗೆಲ್ಲ' ಮತ್ತೆ ಮತ್ತೆ ಹುಟ್ಟಿಬರುತ್ತಾನೆ ಎಂಬ ನಂಬಿಕೆಯಿದೆ.

ಈ ಜಗದ್ಗುರುವನ್ನು ಯಾವುದೇ ಹೆಸರಿನಿಂದ ಕರೆಯಿರಿ; ವಿಶ್ವಾತ್ಮಕ ಚಿಂತನ ತರಂಗಗಳು, ಆಯಾ ಯುಗಕ್ಕೆ ಸಂಬಂಧಿಸಿದ ಭಾವನೆಗಳು ಮೂಡಿಬರುವುದು ಅವನಿಂದಲೇ. ಒಂದು ಕಾಲಮಾನದ ಯುಗಧರ್ಮಕ್ಕೆ ಕಾರಣವಾಗುವ ಆಧ್ಯಾತ್ಮಿಕ ಭಾವನೆಗಳನ್ನು ಹುಟ್ಟಿಸುವವನೂ ಅವನೇ, ಪ್ರಸಾರ ಮಾಡುವವನೂ ಅವನೇ ಮತ್ತು ಅವುಗಳನ್ನು ಪೋಷಿಸುವವನೂ ಅವನೇ ಆಗಿದ್ದಾನೆ. ಇದರ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ದೊಡ್ಡ ಅಲೆಯನ್ನೇ ದೇವದೂತ ಎನ್ನುವುದು. ಅವನು ತನ್ನ ಮನಸ್ಸಿನಲ್ಲಿ ಆ ಯುಗದ ಆಲೋಚನೆಯನ್ನು ಕೇಂದ್ರೀಕರಿಸಿ ಅದನ್ನು ಸ್ಥೂಲರೂಪದಲ್ಲಿ ಮಾನವ ಕೋಟಿಗೆ ಕೊಡುವನು. ಕೃಷ್ಣ, ಬುದ್ಧ, ಕ್ರಿಸ್ತ, ಮೊಹಮ್ಮದ್, ಲೂಥರ್ ಮುಂತಾದವರನ್ನು ತಮ್ಮ ಸಮಕಾಲೀನ ಅಲೆಗಳ ನಡುವೆ ಮೇಲೆದ್ದ ಮಹಾನ್ ಅಲೆಗಳಂತೆ ಪರಿಗಣಿಸಬಹುದು. (ಅವರ ಮಧ್ಯದಲ್ಲಿ ಸುಮಾರು ಐನೂರು ವರುಷಗಳ ಅಂತರ ಇರುವುದು ಕಂಡುಬರುತ್ತದೆ.) ಯಾವ ಅಲೆಯ ಹಿಂದೆ ಅತ್ಯಂತ ಪವಿತ್ರತೆ ಇದೆಯೋ, ಶುದ್ಧ ಚಾರಿತ್ರ್ಯವಿದೆಯೋ, ಅದೇ ಒಂದು ಮಹಾಸುಧಾರಣೆಯಂತೆ ಸಮಾಜದ ಮೇಲೆ ಬೀಳುವುದು" (ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೭, ಪುಟ ೨೩೮).

ಒಬ್ಬ ಪ್ರವಾದಿ ಅಥವಾ ಜಗದ್ಗುರುವು ತನ್ನ ಶಿಷ್ಯರ ಪಂಗಡವೊಂದಕ್ಕೆ ಸ್ಫೂರ್ತಿದಾತನಾಗುತ್ತಾನೆ. ಆ ಶಿಷ್ಯರು ತಮ್ಮ ಗುರುವಿನ ಸಂದೇಶವನ್ನು ಹಿಂದೆ ಹೇಳಿದ 'ಸೃಜನಾತ್ಮಕ ಅಲ್ಪಸಂಖ್ಯಕ'ರಲ್ಲಿ ಹರಡುತ್ತಾರೆ. ಪ್ರವಾದಿ ಮತ್ತು ಆತನ ಶಿಷ್ಯರು ಜಲವಿದ್ಯುತ್ ಅಣೆಕಟ್ಟಿನ ರೀತಿಯಲ್ಲಿ ಕೆಲಸಮಾಡುತ್ತಾರೆ. ಒಂದು ಸಾಧಾರಣ ನದಿಯ ಶಕ್ತಿ ಸೀಮಿತವಾಗಿರುತ್ತದೆ. ಅದನ್ನು ನೀರಾವರಿ, ಕೃಷಿ ಅಥವಾ ನೌಕಾಯಾನಕ್ಕೆ ಮಾತ್ರ ಉಪಯೋಗಿಸಬಹುದು. ಆದರೆ ಜಲವಿದ್ಯುತ್ ಅಣೆಕಟ್ಟಿನ ಸಮೀಪವಿರುವ ಭಾರಿ ಟರ್ಬೈನ್‌ಗಳ ಮೂಲಕ ನೀರನ್ನು ಹಾಯಿಸಿದಾಗ, ಅದೇ ನೀರಿನಿಂದ ವಿದ್ಯುಚ್ಛಕ್ತಿಯ ರೂಪದಲ್ಲಿ ಪ್ರಚಂಡ ಶಕ್ತಿಯು ಉತ್ಪನ್ನವಾಗುವುದು. ಇದೇ ರೀತಿಯಲ್ಲಿ, ಒಬ್ಬ ಪ್ರವಾದಿ ಅಥವಾ ಅವತಾರಪುರುಷನು ಸಾರ್ವತ್ರಿಕ ಆಧ್ಯಾತ್ಮಿಕ ಭಾವನೆಗಳ ಉತ್ಪಾದನಾ ಕೇಂದ್ರವಾಗಿ ಪರಿಣಮಿಸುತ್ತಾನೆ. ಇದಲ್ಲದೆ ತನ್ನ ಸಾಧನೆಯ ಮೂಲಕ ಅವುಗಳನ್ನು ಸ್ವಂತ ಜೀವನದಲ್ಲಿಯೇ ಅನುಷ್ಠಾನಕ್ಕೆ ತರುತ್ತಾನೆ. ಈ ಮೂಲಕ ಆ ಭಾವನೆಗಳಿಗೆ ಅದ್ಭುತಶಕ್ತಿಯ ಸಿಂಚನವನ್ನು ನೀಡುತ್ತಾನೆ. ತದನಂತರ ಅವನ್ನು

ತನ್ನ ಸಂದೇಶದ ರೂಪದಲ್ಲಿ ಮಾನವತೆಗೆ ನೀಡುತ್ತಾನೆ. ಅತ್ಯಧಿಕ ವೋಲ್ಟೇಜಿನ ವಿದ್ಯುತ್ ತಂತಿಗಳು ವಿದ್ಯುದಾಗಾರದಿಂದ ದೇಶದ ವಿವಿಧ ಭಾಗಗಳಿಗೆ ವಿದ್ಯುಚ್ಛಕ್ತಿಯನ್ನು ಕೊಂಡೊಯ್ಯುತ್ತವೆ. ಇದೇ ರೀತಿ ಪ್ರವಾದಿಯ ಶಿಷ್ಯರು ಆತನ ಸಂದೇಶವಾಹಕರ ಪಾತ್ರವನ್ನು ವಹಿಸುತ್ತಾರೆ; ಆತನ ಆಧ್ಯಾತ್ಮಿಕ ಶಕ್ತಿಯನ್ನು ಜನಸಾಮಾನ್ಯರಲ್ಲಿ ಹರಿಸುವ ಹೊಣೆ ಹೊತ್ತ ಪ್ರಮುಖ ಮಾಧ್ಯಮವಾಗುತ್ತಾರೆ.

ಸಾರ್ವತ್ರಿಕವಾದ ಹಾಗೂ ಯುಗಧರ್ಮವನ್ನು ನಿರ್ಧರಿಸುವ ಚಿಂತನ ತರಂಗಗಳು ಸರಿಸುಮಾರು ಪ್ರತಿ ಐನೂರು ವರ್ಷಗಳಿಗೊಮ್ಮೆ ಉಂಟಾಗುತ್ತವೆ ಎಂದು ಸ್ವಾಮಿ ವಿವೇಕಾನಂದರು ಘೋಷಿಸುತ್ತಾರೆ. ಅಂದರೆ ಜಗದ್ಗುರು ಅಥವಾ ಭಗವದವತಾರ ವಿಶ್ವವೇದಿಕೆಯ ಮೇಲೆ ಐನೂರು ವರ್ಷಗಳಿಗೆ ಒಮ್ಮೆ ಕಾಣಿಸಿಕೊಳ್ಳುತ್ತದೆ ಎಂದಹಾಗಾಯಿತು. ಜಾಗತಿಕ ಧರ್ಮಗಳ ಇತಿಹಾಸ, ಬಹುಮಟ್ಟಿಗೆ ಇದು ಸತ್ಯ ಎಂದು ತೋರಿಸಿಕೊಡುತ್ತದೆ. ಸ್ವಾಮಿ ವಿವೇಕಾನಂದರ ಪ್ರಕಾರ, ಇತ್ತೀಚಿನ ವಿಶ್ವಾತ್ಮಕ ಚಿಂತನ ತರಂಗಗಳ ಉತ್ಪಾದನಾಕೇಂದ್ರವೆಂದರೆ ಶ್ರೀರಾಮಕೃಷ್ಣರೇ. ಈ ಬಗ್ಗೆ ಸ್ವಾಮೀಜಿ ಹೇಳುತ್ತಾರೆ, "ಪುನಃ ನಮ್ಮ ಕಾಲದಲ್ಲಿಯೇ ಒಂದು ಭಾವತರಂಗದ ಸ್ಪಂದನವಿದೆ. ಅದರ ಮುಖ್ಯಭಾವನೆಯೇ ಪ್ರಪಂಚದಲ್ಲಿ ಓತಪ್ರೋತನಾದ ದೇವರು. ಅದು ಎಲ್ಲಾ ಕಡೆಗಳಲ್ಲಿಯೂ ಹಲವು ರೂಪಗಳಲ್ಲಿ, ಹಲವು ಪಂಗಡಗಳಲ್ಲಿ ಕಾಣಿಸುತ್ತಿದೆ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೭, ಪುಟ ೨೩೮). (ಮುಂದುವರಿಯುವುದು)

## ಎಲ್ಲರಿಗೂ ಸ್ಥಳವಿದೆ

ಅವತ್ತು ಭಾನುವಾರ. ಅಂದು ವಿಪರೀತ ಚಳಿ ಮತ್ತು ಗಾಳಿ. ಫಿಲಡೆಲ್ಫಿಯ ಚರ್ಚ್‌ನ ಹೊರಗೆ ಪುಟ್ಟ ಬಾಲಕಿಯೊಬ್ಬಳು ಅಳುತ್ತಾ ನಿಂತಿದ್ದಾಳೆ. ಏಕೆ ಹೀಗೆ ಅಳುತ್ತಿದ್ದಾಳೆ? ಚಳಿಯೆಂದೇ? ಅಲ್ಲ. ಚರ್ಚಿನ ಒಳಗಿನಿಂದ ಹೊರಕ್ಕೆ ಬಂದ ಗೌರವಾನ್ವಿತ ಪಾದ್ರಿಯೊಬ್ಬರು ಬಾಲಕಿಯ ಬಳಿ ಬಂದು ಮೃದುವಾಗಿ ಪ್ರಶ್ನಿಸಿದರು, "ಮಗು, ಏಕೆ ಅಳುತ್ತಿರುವೆ? ಒಳಗೆ ಬಂದು ಕುಳಿತುಕೊಳ್ಳುವುದಿಲ್ಲವೇ?" ಬಿಕ್ಕುತ್ತಾ ಆ ಪುಟ್ಟ ಬಾಲಕಿ ಉತ್ತರಿಸಿದಳು. 'ಒಳಗೆ ಜನ ತುಂಬಿಹೋಗಿರುವುದರಿಂದ ಸ್ಥಳವಿಲ್ಲವೆಂದು ನನ್ನನ್ನು ಹೊರಗೆ ಕಳುಹಿಸಿಬಿಟ್ಟರು. ಹಿಂದಿನ ಭಾನುವಾರವೂ ಹೀಗೆ ಆಯಿತು." ಎಣ್ಣೆ ಬಾಚಣಿಗೆ ಕಾಣದ, ಕೆದರಿದ ತಲೆಗೂದಲು ಇರುವ, ಮಾಸಲು ಬಟ್ಟೆ ಉಟ್ಟ ಆ ಬಾಲಕಿಯನ್ನು ಒಂದೇ ಒಂದು ಕ್ಷಣ ದಿಟ್ಟಿಸಿ ನೋಡಿದ ಪಾದ್ರಿಗಳಿಗೆ ಕೂಡಲೇ ಪರಿಸ್ಥಿತಿಯ ಅರಿವಾಯಿತು. ಅವಳ ಪುಟ್ಟ ಹಸ್ತವನ್ನು ಮೃದುವಾಗಿ ಹಿಡಿದು ಒಳಗೆ ಕರೆದೊಯ್ದರು, ಮುಂದಿನ ಸಾಲಿನಲ್ಲೇ ಅವಳನ್ನು ಕುಳ್ಳಿರಿಸಿದರು. ಅಂತೂ ಚರ್ಚಿನ ತರಗತಿಯಲ್ಲಿ ತನಗೊಂದು ಸ್ಥಳ ದೊರೆಯಿತಲ್ಲಾ ಎಂಬ ಆನಂದದಿಂದ ಅವಳ ಪುಟ್ಟ ಕಣ್ಣುಗಳು ಮಿನುಗುತ್ತಿದ್ದವು.

ಎರಡು ವರ್ಷ ಉರುಳಿತು. ಮತ್ತೊಂದು ಚಳಿಯಿಂದ ಕೂಡಿದ ಮುಂಜಾನೆ. ಒಂದು ಶಿಥಿಲವಾದ ಮನೆಯ ಮುಂದೆ ಜನಗಳ ಗುಂಪು ಕೂಡಿತ್ತು. ಆ ಪುಟ್ಟ ಬಾಲಕಿಯ ಮನೆಯದು. ಮುಗ್ಧತೆಯೇ ಎರಕ ಹೊಯ್ದಂತಿದ್ದ ಆ ಪುಟ್ಟ ಬಾಲಕಿ ಚಿರನಿದ್ರೆಯಲ್ಲಿದ್ದಳು! ಬಡತನದ ಕ್ರೂರಮುಷ್ಟಿಯಿಂದ ಯಾರು ತಾನೇ ತಪ್ಪಿಸಿಕೊಳ್ಳಲು ಸಾಧ್ಯ? ದುಃಖತಪ್ತರಾದ ಆ ಬಾಲಕಿಯ ತಂದೆತಾಯಿಗಳು ತಮ್ಮ ಮಗಳನ್ನು ಅತ್ಯಂತ ಪ್ರೀತಿಸುತ್ತಿದ್ದ ಆ ಪಾದ್ರಿಗಳನ್ನು, ಕೊನೆಯ ಕರ್ಮಗಳನ್ನು ಮಾಡಲು ಆಹ್ವಾನಿಸಿದರು. ಶವಸಂಪುಟದ ಆಚ್ಛಾದನವಸ್ತ್ರದ ಕೊನೆಯನ್ನು ಹಿಡಿದು ನಿಂತಿರುವಾತನಿಗೆ ಬಾಲಕಿಯ ಮುಷ್ಟಿಯಲ್ಲಿ ಒಂದು ಕೊಳೆಯಾದ ಕೆಂಪು ಚೀಲವಿರುವುದು ಕಂಡುಬಂದಿತು. ಆ ಚೀಲವನ್ನು ತೆರೆದುನೋಡಿದಾಗ, ಒಂದು ಕಾಗದದ ತುಂಡು ಹಾಗೂ ಕೆಲವು ನಾಣ್ಯಗಳು ಕಂಡುಬಂದವು. ತನ್ನ ಸುಂದರವಾದ ಅಕ್ಷರಗಳಲ್ಲಿ ಆ ಬಾಲಕಿ ಕಾಗದದಲ್ಲಿ ಹೀಗೆಂದು ಬರೆದಿದ್ದಳು: "ಇನ್ನೂ ಅನೇಕ ಬಡಮಕ್ಕಳು ಚರ್ಚಿನ ಭಾನುವಾರದ ತರಗತಿಗಳಿಗೆ ಬರಲು ಸ್ಥಳಾವಕಾಶವಾಗುವ ಒಂದು ದೊಡ್ಡ ಚರ್ಚ್ ಕಟ್ಟಲು ನಾನು ಈ ಹಣವನ್ನು ಉಳಿತಾಯ ಮಾಡುತ್ತಿರುವೆ." ಅದೊಂದೇ ಉದಾತ್ತ ಧ್ಯೇಯದಿಂದ ಕೂಡಿದ ಆ ಪುಟ್ಟ ಮನಸ್ಸು ಎರಡು ವರ್ಷಗಳಿಂದ ಐವತ್ತೇಳು ನಾಣ್ಯಗಳನ್ನು ಕೂಡಿಸಿತ್ತು. ಅದನ್ನು ಓದುತ್ತಿದ್ದಂತೆ ಪಾದ್ರಿಗಳ ಕಣ್ಣುಗಳಿಂದ ದಳದಳನೆ ನೀರು ಹರಿಯಿತು. ಕೂಡಲೇ ಮುಂದೆ ತಾವೇನು ಮಾಡಬೇಕೆಂದು ನಿಶ್ಚಯಿಸಿ, ಆ ಕೆಂಪು ಚೀಲವನ್ನು ಹಿಡಿದುಕೊಂಡು, ತಮ್ಮ ಕಾರಿನೆಡೆಗೆ ದೃಢನಿರ್ಧಾರದ ಹೆಜ್ಜೆ ಹಾಕಿದರು.

ಮುಂದಿನ ಭಾನುವಾರ, ಎಂದಿನಂತೆ ವಾರದ ಧರ್ಮೋಪದೇಶದ ನಂತರ ತಮ್ಮ ಸ್ನೇಹಿತರನ್ನು ಕುರಿತು, ''ಈ ಪುಟ್ಟ ಬಾಲಕಿಯ ಕನಸನ್ನು ನಾವು ನನಸಾಗಿಸಲೇಬೇಕು. ಅದಕ್ಕಾಗಿ ಒಂದು ಕಾರ್ಯಯೋಜನೆ ತಯಾರಿಸೋಣ ಮತ್ತು ಚಂದಾ ಎತ್ತಲು ಪ್ರಾರಂಭಿಸೋಣ'' ಎಂದರು. ಆ ಪ್ರದೇಶದ ಸಮಾಚಾರ ಪತ್ರಿಕೆಯೊಂದು ಈ ಸ್ವಾರಸ್ಯಕರವಾದ ಕಥೆಯನ್ನು ಪ್ರಕಟಿಸಿ, ಧನಸಹಾಯಕ್ಕಾಗಿ ಯಾಚಿಸಿತು. ಅದನ್ನು ಓದಿದ ಸ್ಥಿರಾಸ್ತಿಯ ವ್ಯವಹಾರದಲ್ಲಿ ತೊಡಗಿದ್ದ ಅಲ್ಲಿನ ಆಗರ್ಭ ಶ್ರೀಮಂತನೊಬ್ಬನು ಸಹಸ್ರಾರು ಲಕ್ಷ ಡಾಲರ್‌ಗಳ ತನ್ನ ಜಾಗವನ್ನು, ಆ ಹುಡುಗಿ ದಾನವಾಗಿ ಕೊಟ್ಟಿದ್ದ ಕೇವಲ ಐವತ್ತೇಳು ನಾಣ್ಯಗಳಿಗೆ ಪ್ರತಿಯಾಗಿ ಕೊಡಲು ಮುಂದೆ ಬಂದನು. ಕ್ಷಣಾರ್ಧದಲ್ಲಿ ಎಲ್ಲೆಡೆಯೂ ಸುದ್ದಿ ಹಬ್ಬಿತು. ಹಣದ ಸುರಿಮಳೆಯೇ ಆಯಿತು. ಆ ಪುಟ್ಟ ಬಾಲಕಿಯ ಐವತ್ತೇಳು ನಾಣ್ಯಗಳಿಂದ ಪ್ರಾರಂಭವಾದ ನಿಧಿಯು ಕೇವಲ ಐದು ವರ್ಷಗಳಲ್ಲಿ ೨,೫೦,೦೦೦ ಡಾಲರ್‌ಗಳಾಗಿ ಬೆಳೆಯಿತು. ಇಪ್ಪತ್ತನೇ ಶತಮಾನದ ಪ್ರಾರಂಭದ ಕಾಲದಲ್ಲಿ ಅದೊಂದು ದೊಡ್ಡ ಮೊತ್ತವೇ ಸರಿ. ಫಿಲಡೆಲ್ಫಿಯದಲ್ಲಿ ಬ್ಯಾಪ್ಟಿಸ್ಟ್ ಚರ್ಚ್ ಎಂಬ ಪ್ರಾರ್ಥನಾ ಮಂದಿರವು ಅಸ್ತಿತ್ವಕ್ಕೆ ಬಂದ ಕಥೆಯಿದು. ಈಗ ಅಲ್ಲಿ ೩,೩೦೦ ಜನ ಒಟ್ಟಿಗೇ ಕುಳಿತುಕೊಳ್ಳಬಹುದಾದ ದೊಡ್ಡ ಸಭಾಂಗಣವಿದೆ ಮತ್ತು ಅದು ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಈಗ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ಒಂದು ಉಚಿತ ಔಷಧಾಲಯ ಕೂಡ ಇದೆ. ಸುತ್ತಮುತ್ತಲಿನ ಬಡಮಕ್ಕಳಿಗೆ ಭಾನುವಾರದ ತರಗತಿಗಳೂ ಇವೆ. ಈ ದೊಡ್ಡ ಮೈದಾನದಲ್ಲಿರುವ ಸಭಾಂಗಣದಲ್ಲಿ ಇದಕ್ಕೆ ಕಾರಣೀಭೂತಳಾದ ಹ್ಯಾಟಲ್ ಮೇ ವಿಯಾಲ್ಟ್ ಳ (**Hattle May Wialt**) ಒಂದು ದೊಡ್ಡ ಭಾವಚಿತ್ರವಿದೆ. ಆ ಭಾವಚಿತ್ರದ ಪಕ್ಕದಲ್ಲಿಯೇ ಬಾಲಕಿಯನ್ನು ತುಂಬ ಪ್ರೀತಿಸುತ್ತಿದ್ದ, ಹಾಗೆಯೇ ಬಾಲಕಿಯ ಕನಸು ನನಸಾಗುವಂತೆ ಮಾಡಿದ ಪಾದ್ರಿ ರಸೆಲ್ ಕಾನ್ವೆಲ್ಲರ (**Russel Conwell**) ಒಂದು ದೊಡ್ಡ ಭಾವಚಿತ್ರವನ್ನು ಕೂಡ ತೂಗಿಹಾಕಿದೆ. (ಬರಹ : ಕುಮಾರಿ ಸ್ವರ್ಣಗೌರಿ)